ಮಾಡಿ ನಿರ್ದಿಷ್ಟ ದಿನಾಂಕವನ್ನು ಗುರುತು ಮಾಡಬೇಕು. ಅಲ್ಲಿಯ ಅಧಿಕಾರಿಗಳು ಬಡ ರೈತರಿಂದ ಕಲೆಕ್ಟ್ ಮಾಡಬಾರದು, ದೊಡ್ಡ ರೈತರಿಂದ ಕಲೆಕ್ಟ್ ಮಾಡಬೇಕು ಎಂದು ನೋಡುವುದಿಲ್ಲ, ಎಲ್ಲರಿಗೂ ಒಂದೇ ತರಹ ಮಾಡುತ್ತಾರೆ.

ಶ್ರೀ ಶರಣಬಸಪ್ಪ ದರ್ಶನಾಪುರ : ಮಾನ್ಯ ಅಧ್ಯಕ್ಷರೆ, ಬಾಕಿ ಹಣವನ್ನು ಕಲೆಕ್ಟ್ ಮಾಡುವ ಕೊನೆಯ ದಿನಾಂಕವನ್ನು ಎಕ್ಸ್‌ಟೆಂಡ್ ಮಾಡುವಂಥ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆ.

9. ಪರಸ್ಪರ ಅಭಿನಂದನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ನಾನು ಸರ್ಕಾರದ ಪರವಾಗಿ ಮತ್ತು ನಮ್ಮೆಲ್ಲರ ಪರವಾಗಿ ತಮಗೆ ಅಭಿನಂದನೆಯನ್ನು ಸಲ್ಲಿಸುವ ಸಲುವಾಗಿ ಈ ಸಂದರ್ಭದಲ್ಲಿ ಎರಡು ಮಾತುಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಮೊದಲನೆಯಾಗಿ ಈ ಅಧಿವೇಶನ ಬಹಳ ಯಶಸ್ವಿಯಾಗಿ ನಡೆಯುವುದಕ್ಕೆ ಸರ್ಕಾರದ ತಪ್ಪು ಎಲ್ಲಿ ಇದೆ ಎನ್ನುವುದು ಎತ್ತಿ ಹಿಡಿಯುವುದಕ್ಕೆ ಇರಬಹುದು, ವಿರೋಧ ಪಕ್ಷದ ಸದಸ್ಯರ ವಿಚಾರಗಳಿಗೆ ಮಾನ್ಯತೆಯನ್ನು ಕೊಡತಕ್ಕಂಥ ವಿಚಾರ ಇರಬಹುದು, ಹೀಗೆ ಎಲ್ಲಾ ವಿಚಾರದಲ್ಲೂ ಸಹಿತ ಬಹಳ ಸಹಕಾರವನ್ನು ಕೊಟ್ಟು, ಮತ್ತು ಬಜೆಟ್ ಮಂಡನೆ ಮಾಡತಕ್ಕಂಥ ವಿಚಾರದಲ್ಲೂ ಕೂಡ ತಾವು ಯಶಸ್ವಿಯಾಗಿ ನಡೆಸಿಕೊಟ್ಟಿದ್ದೀರಿ. ಇದಕ್ಕಾಗಿ ನಾನು ತಮಗೆ ಧನ್ಯವಾದಗಳನ್ನರ್ಪಿಸಲಿಕ್ಕೆ ಬಯಸುತ್ತೇನೆ. ಮತ್ತು ತಾವು ಕಳೆದ ನಾಲ್ಕೂವರೆ ವರ್ಷಗಳಿಂದ ಆ ಪೀಠದಲ್ಲಿ ಕುಳಿತು ಆ ಪೀಠದ ಗೌರವವನ್ನು ಹೆಚ್ಚಿಸುವುದರ ಜೊತೆಗೆ ಈ ಸದನದಲ್ಲಿ ಬಹಳಷ್ಟು ಭಿನ್ನಾಭಿಪ್ರಾಯಗಳು ಬಂದಂಥ ಸಂದರ್ಭದಲ್ಲಿ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಹೀಗೆ ಎಲ್ಲಾ ಹಂತದಲ್ಲೂ ಸಹಿತ ಬಹಳ ಸಂಯಮದಿಂದ ನಡೆದುಕೊಂಡು ಆ ಒಂದು ಸ್ಥಾನದ ಮತ್ತು ಸದನದ ಗೌರವವನ್ನು ಎತ್ತಿಹಿಡಿದಿದ್ದೀರಿ. ಇನ್ನು ಸರ್ಕಾರದ ಕಡೆಯಿಂದ ನಾವು ಹೇಳುವುದೇ ಸರಿ, ನಾವು ಮಾಡುವುದೇ ಸರಿ ಎಂದು ನಾವು ಹೇಳುವುದಿಲ್ಲ. ಅನೇಕ ಸಂದರ್ಭದಲ್ಲಿ ಸರ್ಕಾರದ ಕಡೆಯಿಂದ ನಮ್ಮ ತಪ್ಪುಗಳು ಸಹ ಇರುತ್ತವೆ. ತಮ್ಮ ಮನಸ್ಸು ನೋಯುವ ರೀತಿಯಲ್ಲಿ ನಾವು ಮಂತ್ರಿಗಳು ಅನೇಕ ಸಂದರ್ಭದಲ್ಲಿ ನಡೆದುಕೊಂಡಿರಬಹುದು. ಆ ರೀತಿ ನಿಮ್ಮ ಮನಸ್ಸಿಗೆ ನೋವಾಗಿದ್ದರೆ ಈ ಸಂದರ್ಭದಲ್ಲಿ ನಾನು ವೈಯಕ್ತಿಕವಾಗಿ ನಮ್ಮೆಲ್ಲರ ಪರವಾಗಿ ಕ್ಷಮೆ ಕೇಳಲಿಕ್ಕೆ ಬಯಸುತ್ತೇನೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. 'ನನ್ನ ರಕ್ಷಣೆಗೆ ನೀವು ಮಂತ್ರಿಗಳು ಯಾರೂ ಬರಲಿಲ್ಲ' ಎನ್ನತಕ್ಕಂಥ ಮಾತನ್ನು ತಾವು ಮೊನ್ನೆಯ ದಿವಸ ಹೇಳಿದ್ದೀರಿ. ಯಾರಿಗೂ ಆ ರೀತಿಯ ಉದ್ದೇಶಗಳು, ದುರುದ್ದೇಶ ಇಲ್ಲವೆಂದು ಹೇಳಬಯಸುತ್ತೇನೆ. ತಾವು ಪಕ್ಷದ ಸಂಖ್ಯೆ ಆಧಾರದ ಮೇಲೆ ಯಾವತ್ತೂ ಸಹಿತ ಅಧ್ಯಕ್ಷರಾಗಿ ನಡೆದುಕೊಂಡಿಲ್ಲ. ಯಾವುದೇ ಪಕ್ಷದ ಸದಸ್ಯರು ಇರಲಿ, ಒಬ್ಬರು, ಇಬ್ಬರು ಇರಲಿ, ಅಥವಾ ಅವರ ಕ್ಷೇತ್ರಕ್ಕೆ ಸಂಬಂಧಪಟ್ಟ ಸಮಸ್ಯೆಗಳು ಇರಬಹುದು ಅಥವಾ ಸಮಾಜಕ್ಕೆ ಸಂಬಂಧಪಟ್ಟ, ರಾಜ್ಯದ ಹಿತವನ್ನು ಕಾಪಾಡತಕ್ಕಂಥ ಸಂದರ್ಭ ಇರಬಹುದು. ಹೀಗೆ ಎಲ್ಲಾ ಸಂದರ್ಭಗಳಲ್ಲೂ ತಾವು ತಮ್ಮ ಸ್ಥಾನದ ಗೌರವವನ್ನು ಎತ್ತಿಹಿಡಿದಿದ್ದೀರಿ. ಈ ಅಧಿವೇಶನದಲ್ಲಿ ವಿಶೇಷವಾಗಿ ಮಹಿಳೆಯರ ಸಮಸ್ಯೆಗಳಿಗೆ ತಾವು ಹೆಚ್ಚಿನ ಮಹತ್ವವನ್ನು ಕೊಟ್ಟು ಸದನ ಸಮಿತಿಯನ್ನು ಮಾಡಿರುವುದರಿಂದ,

ನಮ್ಮ ಸಮಾಜದಲ್ಲಿ ಪ್ರತಿ ದಿನವೂ ಮಹಿಳೆಯರ ಮೇಲೆ ನಡೆಯುತ್ತಿರುವ ಅನ್ಯಾಯ, ದಬ್ಬಾಳಿಕೆ ಇವುಗಳನ್ನು ತಡೆಗಟ್ಟಲಿಕ್ಕೆ ಈ ಸದನಸಮಿತಿ ಕೊಡತಕ್ಕಂಥ ಸಲಹೆಗಳು ಬಹಳ ಉಪಯೋಗವಾಗುತ್ತವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಈ ವಿಚಾರದಲ್ಲಿ ಈಗಾಗಲೇ ರಾಷ್ಟ್ರಮಟ್ಟದ, ಅಂತರ್‌ರಾಷ್ಟ್ರೀಯ ಮಟ್ಟದ ನಮ್ಮ ಪತ್ರಿಕೋದ್ಯಮದ ಮಿತ್ರರು ಸಹಿತ ತಮ್ಮ ಕೆಲಸವನ್ನು ಮೆಚ್ಚಿದ್ದಾರೆ. ನಾನು ಗೃಹಮಂತ್ರಿ ಆಗಿರುವುದರಿಂದ ನನ್ನ ಹತ್ತಿರ ಬಂದು ಆ ಒಂದು ವಿಚಾರವನ್ನು ಸಹಿತ ಪ್ರಸ್ತಾಪ ಮಾಡಿ, ಈ ದೃಷ್ಟಿಯಲ್ಲಿ ಸದನ ಬಹಳ ಒಳ್ಳೆಯ ಕೆಲಸವನ್ನು ಮಾಡಿದೆ, ಆ ಸದನಸಮಿತಿ ಕೊಡತಕ್ಕಂಥ ತೀರ್ಮಾನಗಳನ್ನು ತಾವು ಆದಷ್ಟು ಬೇಗ ಕಾರ್ಯಾಚರಣೆಗೆ ತರಲಿಕ್ಕೆ ಪ್ರಯತ್ನವನ್ನು ಮಾಡಬೇಕು ಎನ್ನುವಂಥ ವಿಚಾರವನ್ನು ಸಹಿತ ಹೇಳಿದ್ದಾರೆ. ಇದೇ ಸಂದರ್ಭದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು, ಶ್ರೀಯುತರುಗಳಾದ ವಾಟಾಳ್ ನಾಗರಾಜ್, ಪುಟ್ಟಣ್ಣಯ್ಯ, ಮುನಿಯಪ್ಪ, ಜುಲ್ಫೀಕರ್ ಹಷ್ಮಿ, ರಾಚೇಂದ್ರನ್ ಹೀಗೆ ಎಲ್ಲಾ ಪಕ್ಷದ ಗೌರವಾನ್ವಿತ ಸದಸ್ಯರುಗಳು ಸಹಿತ ಸದನದ ಗೌರವವನ್ನು ಎತ್ತಿಹಿಡಿಯಲಿಕ್ಕೆ ಸಂಪೂರ್ಣವಾದ ಸಹಕಾರವನ್ನು ಕೊಟ್ಟಿದ್ದಾರೆ. ಈ ಸರಕಾರದ ಮಂತ್ರಿಗಳಾಗಲಿ, ವಿಶೇಷವಾಗಿ ನಮ್ಮ ಸಭಾನಾಯಕರಾದ ಶ್ರೀಮಾನ್ ಜೆ.ಹೆಚ್.ಪಟೇಲರು ಸದಸ್ಯರುಗಳನ್ನು ರಾಜಕೀಯ ದೃಷ್ಟಿಯಿಂದಾಗಲಿ, ಪಕ್ಷಭೇದದಿಂದಾಗಲಿ ಯಾರನ್ನೂ ಸಹಿತ ನೋಡಿಲ್ಲ. ಇನ್ನು ಮನೆಗಳನ್ನು ಕೊಡತಕ್ಕಂಥ ವಿಚಾರದಲ್ಲಿ ಕೆಲವು ಸದಸ್ಯರಿಗೆ ಸಿಗಬೇಕಾದಷ್ಟು ಮನೆಗಳನ್ನು ಕೊಡಲಿಲ್ಲವೆಂದು ನಮಗೆ ಅನಿಸಿತು. ಆ ದೃಷ್ಟಿಯಿಂದಲೇ ವಿಶೇಷವಾಗಿ ಇದನ್ನು ಸಚಿವಸಂಪುಟಕ್ಕೆ ತೆಗೆದುಕೊಂಡು ಬಂದು ಇದರ ಬಗ್ಗೆ ಸರಿಮಾಡತಕ್ಕಂಥ ಕೆಲಸವನ್ನು ಮಾಡಿದ್ದೇವೆ. 30 ಸಾವಿರ ಹೆಚ್ಚಿನ ಮನೆಗಳನ್ನು ಈ ವರ್ಷದಲ್ಲಿ ಕೊಡಲಿಕ್ಕೆ ತೀರ್ಮಾನ ಮಾಡಿದ್ದೇವೆ. ಅದೇ ರೀತಿಯಲ್ಲಿ ಪ್ರಮೋಷನಲ್ ರಿಸರ್ವೇಷನ್ ಕೊಡತಕ್ಕಂಥ ವಿಚಾರದಲ್ಲಿ ಸಹ ಎಲ್ಲಾ ಪ್ಲೋರ್ ಲೀಡರ್ಸ್‌ಗಳನ್ನು ಸಹ ಕರೆದು ಚರ್ಚೆ ಮಾಡಲಿಕ್ಕೆ ತಾವು ಒಂದು ಅವಕಾಶವನ್ನು ಮಾಡಿಕೊಟ್ಟಿರುವುದಕ್ಕೆ ಸಹ ನಾನು ಅದನ್ನು ನೆನಪಿಸಿಕೊಳ್ಳುತ್ತೇನೆ. ಇವತ್ತು ಈ ರಾಜ್ಯವನ್ನು ಕಟ್ಟುವ ದೃಷ್ಟಿಯಿಂದ ನಾವೆಲ್ಲರೂ ಸದನದ ಗೌರವವನ್ನು as an institution ಎತ್ತಿಹಿಡಿಯತಕ್ಕಂಥದ್ದು ಬಹಳ ಅವಶ್ಯಕತೆ ಇದೆ. ಆ ದಿಕ್ಕಿನಲ್ಲಿ ವಿರೋಧ ಪಕ್ಷದ ಸದಸ್ಯರುಗಳು ಬಹಳ ಉತ್ತಮವಾಗಿರತಕ್ಕಂಥ ಕೆಲಸಗಳನ್ನು ಮಾಡಿದ್ದಾರೆ. ರಾಜ್ಯದ ಅನೇಕ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರಲಿಕ್ಕೆ ಈ ಅಧಿವೇಶನ ಅನುಕೂಲವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಿ, ಕಳೆದ ನಾಲ್ಕೂವರೆ ವರ್ಷಗಳ ಸಮಯದಲ್ಲಿ ನಮ್ಮ ಸರ್ಕಾರ ಸಾಕಷ್ಟು ಸಾಧನೆಗಳನ್ನು ಮಾಡಿದೆ. ಸಾಧನೆಗಳನ್ನು ಮಾಡಿರುವುದು ಮತ್ತು ಇತರೆ ಎಲ್ಲಾ ವಿಚಾರಗಳನ್ನು ಮಾನ್ಯ ಸಭಾನಾಯಕರು ಈಗಾಗಲೇ ರಾಜ್ಯದ ಜನತೆಯ ಗಮನಕ್ಕೆ ಈ ಸದನದ ಮೂಲಕ ತಂದಿದ್ದಾರೆ. ತಾವು ಯಶಸ್ವಿಯಾಗಿ ಈ ಅಧಿವೇಶನವನ್ನು ನಡೆಸಿಕೊಟ್ಟಿದ್ದೀರಿ. ತಮಗೆ, ವಿರೋಧ ಪಕ್ಷದ ನಾಯಕರಿಗೆ, ಆಡಳಿತ ಪಕ್ಷದ ಮತ್ತು ವಿವಿಧ ಪಕ್ಷದ ಸದಸ್ಯರೆಲ್ಲರೂ ಸಹಿತ ಸಹಕಾರವನ್ನು ಕೊಟ್ಟಿದ್ದಾರೆ. ಬಹಳಷ್ಟು ಸಂದರ್ಭಗಳಲ್ಲಿ ರಾತ್ರಿ ಹೊತ್ತು ತಡವಾದರೂ ಸಹಿತ ಹೆಚ್ಚು ಹೊತ್ತು ಸದನದಲ್ಲಿ ಕುಳಿತು ಸಹಕರಿಸುತ್ತಿದ್ದರು. ಮತ್ತು ಅನೇಕ ಕೊರತೆಗಳು ಇರಬಹುದು, ಇಲ್ಲ ಎಂದು ನಾನು ಹೇಳುವುದಿಲ್ಲ. ಆದ್ದರಿಂದ ಗೌರವಾನ್ವಿತ ಎಲ್ಲಾ ಸದಸ್ಯರುಗಳಿಗೆ, ವಿಶೇಷವಾಗಿ ತಮಗೆ ನಾನು ಸರ್ಕಾರದ ಪರವಾಗಿ,

ನನ್ನ ಪರವಾಗಿ, ಆಡಳಿತ ಪಕ್ಷದ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅದೇ ರೀತಿಯಲ್ಲಿ ಕರ್ನಾಟಕದ ಹಿರಿಮೆಯನ್ನು ಎತ್ತಿಹಿಡಿಯುವ ದೃಷ್ಟಿಯಿಂದ ಈ ಸದನದಲ್ಲಿ ಆಗತಕ್ಕಂಥ ಚರ್ಚೆಯನ್ನು ಅದರಲ್ಲೂ ವಿಶೇಷವಾಗಿ ಸಾರ್ವಜನಿಕರ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುವ ದೃಷ್ಟಿಯಿಂದ ಬಹಳ ಉತ್ತಮವಾಗಿರತಕ್ಕಂಥ ಕೆಲಸವನ್ನು ಎಲ್ಲಾ ಮಾಧ್ಯಮದವರು ಸಹಿತ ಮಾಡಿದ್ದಾರೆ. ಈ ಸಂದರ್ಭದಲ್ಲಿ ಮಾನ್ಯ ರಾಜ್ಯಪಾಲರು ಪ್ರತಿ ಸಲವೂ ಭಾಷಣವನ್ನು ಮಾಡಿ ನಮಗೆ ಮಾರ್ಗದರ್ಶನ ಮಾಡುವ ಹಾಗೆ ಈ ಸಲವೂ ಕೂಡ ಮಾಡಿದ್ದಾರೆ. ಅದನ್ನು ಸಹ ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುತ್ತೇನೆ. ನನಗೆ ಎರಡು ಮಾತುಗಳನ್ನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ಮತ್ತು ಎಲ್ಲಾ ಮಾಧ್ಯಮವರ್ಗದವರಿಗೂ ಮತ್ತೊಮ್ಮೆ ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಸುಮಾರು 18 ದಿವಸಗಳ ಕಾಲ ನಾವು ಸತತವಾಗಿ ಈ ಸದನದಲ್ಲಿ ಕೆಲಸವನ್ನು ಮಾಡಿಕೊಂಡು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ಇದರಲ್ಲಿ ವಿಶೇಷವಾಗಿ ಈಗಾಗಲೇ ಮಾನ್ಯ ಮಂತ್ರಿಗಳು ಹೇಳಿದ ಹಾಗೆ, ಕೆಲವು ಕ್ಷೇತ್ರಗಳಲ್ಲಿ ಮನೆಗಳನ್ನು ಕೊಡತಕ್ಕಂಥದ್ದರಲ್ಲಿ ಏನೊಂದು ವ್ಯತ್ಯಾಸ ಆಗಿತ್ತು. ಅದರ ಬಗ್ಗೆ ನಾವು ಪ್ರಪ್ರಥಮ ದಿನವೇ ತಮ್ಮ ಅಪ್ಷಣೆ ಪಡೆದು ಆ ವಿಷಯವನ್ನು ಪ್ರಸ್ತಾಪ ಮಾಡಿದಾಗ, ಇದರಲ್ಲಿ ಅನ್ಯಾಯವಾಗಿದೆ ಎಂದು ತಮಗೂ ಕಂಡು ಬಂದಾಗ, ಇದಕ್ಕೆ ಒಂದು ಪರಿಹಾರ ಕಂಡುಹಿಡಿಯಬೇಕೆಂದು ಹೇಳಿ ಇದಕ್ಕೆ ಚರ್ಚೆಮಾಡುವುದಕ್ಕೆ ಅವಕಾಶ ಕೊಟ್ಟು ಕೊನೆಗೆ ಇದರ ಬಗ್ಗೆ ಇಲ್ಲಿ ಚರ್ಚೆ ಕೂಡ ಆಯಿತು ಮತ್ತು ಅವರು ತಮ್ಮ ತಪ್ಪನ್ನು ಒಪ್ಪಿಕೊಂಡು ಇದನ್ನು ಸರಿಪಡಿಸುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿ, ಇದನ್ನು ಕ್ಯಾಬಿನೆಟ್‌ನಲ್ಲಿ ಇಟ್ಟು ಯಾವ್ಯಾವ ಕ್ಷೇತ್ರಗಳಲ್ಲಿ ಅನ್ಯಾಯವಾಗಿದೆ ಅದನ್ನು ಸರಿಪಡಿಸುತ್ತೇವೆ ಎನ್ನತಕ್ಕಂಥ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಿದರು. ನಮ್ಮ ಉದ್ದೇಶ ಕೂಡ ಇದೇ ಆಗಿತ್ತು. ಹಾಗೆಯೇ ಪಂಚಾಯತ್ ರಾಜ್ ಬಿಲ್ ತಿದ್ದುಪಡಿ ಬಗ್ಗೆ ಕೂಡ ನಾವು ಸಾಕಷ್ಟು ಇಲ್ಲಿ ಚರ್ಚೆ ಮಾಡಿದ್ದೇವೆ. ಸಂವಿಧಾನಾತ್ಮಕವಾಗಿ ಚರ್ಚೆ ಕೂಡ ಇಲ್ಲಿ ನಡೆಯಿತು. ಹಿರಿಯ ಸದಸ್ಯರಾದ ಮಾನ್ಯ ಘೋರ್ಪಡೆಯವರು ಮತ್ತು ಮಾಜಿ ಮುಖ್ಯಮಂತ್ರಿಗಳಾದ ಶ್ರೀಮಾನ್ ವೀರಪ್ಪಮೊಯಿಲಿಯವರು ಮತ್ತು ನಮ್ಮ ಎಲ್ಲಾ ವಿರೋಧಪಕ್ಷದ ಮುಖಂಡರುಗಳು ಇದರಲ್ಲಿ ಭಾಗವಹಿಸಿ, ಈ ಒಂದು ಚರ್ಚೆ ಕೂಡ ಬಹಳಷ್ಟು ಒಳ್ಳೆಯ ರೀತಿಯಲ್ಲಿ ಆಗುವಂತೆ ತಾವು ಅವಕಾಶ ಮಾಡಿ ಕೊಟ್ಟಿದ್ದೀರಿ. ಜೊತೆಯಲ್ಲಿ ಮೀಸಲಾತಿ ಬಗ್ಗೆ ಸರ್ಕಾರದ ಆಜ್ಞೆ ಏನಿತ್ತು. ಈ ಒಂದು ಸೂಕ್ಷ್ಮವಾದಂತಹ ಸಮಸ್ಯೆಗೆ ಯಾವರೀತಿಯಿಂದ ಒಂದು ಪರಿಹಾರವನ್ನು ಕಂಡುಕೊಳ್ಳಬೇಕೆಂಬ ದೃಷ್ಟಿಯಿಂದ ತಾವು ಸಭೆ ಮಾಡಿ ನಮ್ಮನ್ನು ಕರೆಸಿದ್ದೀರಿ. ಅನೇಕ ಸಾರಿ ನಮಗೂ ಕೂಡ ಮುಜುಗರ ಆಯಿತು, ನಿಮಗೂ ಕೂಡ ಇದನ್ನು ಏಕಾದರೂ ಮಾಡಿಕೊಂಡೆ ಎನ್ನತಕ್ಕಂಥ ಪರಿಸ್ಥಿತಿ ಬಂದಿದೆ. ಆದರೆ, ಕೊನೆಗೆ ಇದನ್ನು 2ನೇ ತಾರೀಖು ಕ್ಯಾಬಿನೆಟ್‌ನಲ್ಲಿಟ್ಟು ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ವಾಗ್ದಾನವನ್ನು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಸಮ್ಮುಖದಲ್ಲಿ ಮಾಡಿದರು. ಆದರೆ, ಇದಕ್ಕೆ ಇನ್ನು ಯಾವ ನಿರ್ಣಯಕ್ಕೂ ಕೂಡ ಬಂದಿಲ್ಲ. ಈ ಇಷ್ಯೂವನ್ನು ಇದೇ ರೀತಿ ಜೀವಂತವಾಗಿ ಇಟ್ಟರೆ, ರಾಜಕೀಯ ದೃಷ್ಟಿಯಿಂದ ನೀವು ಸಹಿಸಿಕೊಳ್ಳತಕ್ಕಂಥ

ಶಕ್ತಿ ನಿಮಗೆ ಇರಬಹುದು. ಏಕೆಂದರೆ, ನಾನು ಈಗಾಗಲೇ ಹೇಳಿದ ಹಾಗೆ, ಮನುಷ್ಯ ಬಲ, ಆರ್ಥಿಕ ಬಲ, ಶೈಕ್ಷಣಿಕ ಬಲ ಮತ್ತು ಸಮಾಜದ ಬಹುಸಂಖ್ಯಾತರ ಬಲ ಇದೆ ಎಂದು ತಿಳಿದುಕೊಂಡು ಇದನ್ನು ಮುಂದುವರಿಸಿಕೊಂಡು ಹೋಗಬಹುದು. ಆದರೆ ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಮತ್ತು ನ್ಯಾಯದ ದೃಷ್ಟಿಯಿಂದ ಮತ್ತು ಯಾರು ತುಳಿತಕ್ಕೆ ಒಳಪಟ್ಟಿದ್ದಾರೆಯೋ ಅಂಥವರಿಗೆ ನ್ಯಾಯ ಕೊಡುವುದರಲ್ಲಿ ತಾವು ವಿಫಲರಾಗಿರುತ್ತೀರಿ ಎನ್ನತಕ್ಕಂಥದನ್ನು ಕೂಡ ನೀವು ನೆನಪಿನಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಏಕೆಂದರೆ, ಅನೇಕಸಾರಿ ಇಂಥ ಸಾಮಾಜಿಕ ನ್ಯಾಯದ ನಿರ್ಣಯಗಳನ್ನು ತೆಗೆದುಕೊಳ್ಳುವಾಗ ಕೆಲವು ಸಲ ನಾವು ದೃಢವಾದಂತಹ, ದಿಟ್ಟವಾದಂತಹ ಹೆಜ್ಜೆ ಇಡಬೇಕಾಗುತ್ತದೆ. ಏಕೆಂದರೆ, ಇಂಥ ಹೆಜ್ಜೆ ಇಡುವಾಗಲೇ ಸಮಾಜದಲ್ಲಿ ಇದಕ್ಕೆ ಪ್ರತಿಕಾರವಾಗಲಿ ಅಥವಾ ವಿರೋಧವಾಗಲಿ ಬರುವಂತಹದು ಸಹಜ. ಈ ಒಂದು ಸಮಸ್ಯೆಯನ್ನು ನಾನು ಇಲ್ಲಿ ಎತ್ತಿದಾಗ, ಇದು ಸೂಕ್ಷ್ಮವಾಗಿರುವುದರಿಂದ ಇದನ್ನು ಇಲ್ಲಿಗೆ ಬಿಟ್ಟು, ಪ್ರತ್ಯೇಕವಾಗಿ ಚರ್ಚೆ ಮಾಡಬೇಕೆಂದು ತಾವು ಹೇಳಿ, ಈ ವಿಷಯದ ಬಗ್ಗೆ ಕಮಿಟಿ ರೂಮ್‌ನಲ್ಲಿ, ಇದಕ್ಕೆ ಇಲ್ಲಿ ಬಹಿರಂಗವಾಗಿ ನಮ್ಮಗಳ ಅಭಿಪ್ರಾಯಗಳನ್ನು ಕೊಡಬಾರದೆಂದು ಅಲ್ಲಿ ಹೇಳಿದ್ದೇವೆ. ಈ ವಿಷಯಕ್ಕೆ ಕೊನೆಗಳಿಗೆಯಲ್ಲಿ ಅವರು ಸ್ಪಂದಿಸಿದರು. ಆದರೆ, ಇದಕ್ಕೆ ಇನ್ನು ಉತ್ತರ ಬಂದಿಲ್ಲ, ಅದರ ಫಲ ನಮಗೆ ಇನ್ನೂ ದೊರಕಲಿಲ್ಲ. ನಾನು ಈಗ ಅಪೇಕ್ಷೆ ಮಾಡುವುದೇನೆಂದರೆ, ಇವತ್ತು ಅಥವಾ ನಾಳೆ, ಈ ಒಂದು ವಿಚಾರಕ್ಕೆ ಬೇಗ ನಿರ್ಣಯವನ್ನು ತೆಗೆದುಕೊಂಡು, ಜನರಿಗೆ ಸಹಾಯ ಮಾಡತಕ್ಕಂಥದ್ದು ಮತ್ತು ಸಾಂತ್ವನ ಮಾಡತಕ್ಕಂಥ ಕೆಲಸ ಆಗಬೇಕು. ಇದೇ ಸಂದರ್ಭದಲ್ಲಿ ಈ ವಿಷಯದ ಬಗ್ಗೆ ಯಾರು ಬಹಳ ಅಜಿಟೇಟ್ ಮಾಡುತ್ತಾರೋ ಅವರಿಗೂ ಕೂಡ ಒಂದು ಸಮಜಾಯಿಷಿ ಉತ್ತರವನ್ನು ಕೊಡಬೇಕಾಗುತ್ತದೆ. ಏಕೆಂದರೆ, ನೀವು ಪ್ರತಿಯೊಂದಕ್ಕೂ ಹೆದರಿಕೆಯಿಂದ ಬೆದರಿ ಹೋಗಬಾರದು. ಕೆಲವು ಸಲ ಸಿಗತಕ್ಕಂಥದ್ದನ್ನೂ ದೋಚಬೇಕು ಎನ್ನತಕ್ಕಂಥ ಜನ ಬಹಳ ಇದ್ದಾರೆ. ಅವರಿಗೂ ನೀವು ಸ್ವಲ್ಪ ತಿಳುವಳಿಕೆ ಕೊಡಬೇಕಾಗುತ್ತದೆ. ಕಾನ್‌ಸ್ಟಿಟ್ಯೂಷನಲ್ ಮ್ಯಾಟರ್ ಅಥವಾ ಸಬ್‌ಜ್ಯಕ್ಟ್ ಏನಿದೆ ಮತ್ತು ಸುಪ್ರೀಂ ಕೋರ್ಟ್ ನಿರ್ಣಯಗಳು ಏನಿವೆ, ಇವೆಲ್ಲವನ್ನೂ ಕೂಡ ಹೇಳಿಕೊಟ್ಟರೆ ಅವರಿಗೂ ಸ್ವಲ್ಪ ಸಮಾಧಾನವಾಗಬಹುದು. ಇವತ್ತು ಇನ್‌ಸ್ಪಿಗೇಟ್ ಮಾಡತಕ್ಕಂಥ ಜನ ಬಹಳ ಇದ್ದಾರೆ. ಇಂಥ ಎಮೋಶನಲ್ ಇಷ್ಯೂಗೆ ಬಹಳ ಜನ ಇನ್‌ಸ್ಪಿಗೇಟ್ ಮಾಡುವವರು ಇರುತ್ತಾರೆ. ಇಂಥ ಜನ ಈ ಕಡೆಯು ಇರುತ್ತಾರೆ, ಆ ಕಡೆಯು ಇರುತ್ತಾರೆ, ಇದಕ್ಕಾಗಿ ಬಹಳ ನ್ಯಾಯಯುತವಾಗಿ ಮತ್ತು ದುರ್ಬಲರ ಪರವಾಗಿ ಸಹಾಯ ಮಾಡತಕ್ಕಂಥ ಶಕ್ತಿ ನಿಮಗೆ ಬರಲೆಂದು ಈ ಸಂದರ್ಭದಲ್ಲಿ ನಾನು ಹಾರೈಸುತ್ತೇನೆ. ಏಕೆಂದರೆ, ಈ ಶಕ್ತಿ ಇಲ್ಲದೇ ನೀವು ನಿರ್ಣಯ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ, ಈ ಸಂದರ್ಭದಲ್ಲಿ ನಿಮಗೆ ಸ್ವಲ್ಪ ನೋವಾಗಬಹುದು ಮತ್ತು ಬೇರೆಯವರಿಗೆ ತೊಂದರೆ ಕೊಡಬಹುದು ಅಥವಾ ನಾವು ಅಸಹಾಯಕರೆಂದು ಹೀಯಾಳಿಸತಕ್ಕಂಥ ಮಾತನ್ನು ಕೂಡ ಆಡಬಹುದು. ಆದರೂ ಕೂಡ ಇದನ್ನು ತಡೆದುಕೊಂಡು ತಾವು ಸಾಮಾಜಿಕ ನ್ಯಾಯವನ್ನು ಕೊಡತಕ್ಕಂಥ ಪ್ರಯತ್ನ ಮಾಡುವುದಕ್ಕೆ ಅವಕಾಶ ಕೊಟ್ಟರೆ ನಿಮಗೆ ನಾನು ನಿಜವಾಗಿಯೂ ಅಭಿನಂದಿಸುತ್ತೇನೆ ಮತ್ತು ಇದರ ಫಲ ಬಹುಶಃ ಬಡ ಜನರಿಗೆ ಸಿಗುತ್ತದೆ ಎನ್ನತಕ್ಕಂಥ ನಂಬಿಕೆಯನ್ನು ನಾನು ಇಟ್ಟುಕೊಂಡಿರುತ್ತೇನೆ. ಹಾಗೆಯೆ ಇವತ್ತು

ಮಹಿಳೆಯರ ಮೇಲೆ ಆಗತಕ್ಕಂಥ ದೌರ್ಜನ್ಯದ ಬಗ್ಗೆ ವಿಶೇಷವಾಗಿ ಚರ್ಚೆಯನ್ನು ನಡೆಸಿ ತಾವು ಒಂದು ವಿಶೇಷವಾದಂತಹ ಸದನ ಸಮಿತಿಯನ್ನು ಇವತ್ತು ನಾಮಿನೇಟ್ ಮಾಡಿ, ಅದರ ಕಾರ್ಯಾಚರಣೆಯನ್ನು ಕೇವಲ ಎರಡು-ಮೂರು ತಿಂಗಳಲ್ಲಿ ರಿಪೋರ್ಟ್‌ನ್ನು ಕೊಡಬೇಕೆಂಬುದರ ಬಗ್ಗೆ ಇಲ್ಲಿ ಚರ್ಚೆ ನಡೆಯಿತು, ಇದಕ್ಕೂ ಕೂಡ ತಾವು ಸ್ಪಂದಿಸಿದ್ದೀರಿ. ಇದರ ಜೊತೆಯಲ್ಲಿ ಇನ್ನೊಂದು ಪ್ರಮುಖವಾದಂತಹ ವಿಷಯ ಏನೆಂದರೆ, ಈ ಸದನದಲ್ಲಿ ಪ್ರಸ್ತಾಪ ಮಾಡಿದಂಥ ನಬಾರ್ಡ್ ವಿಷಯವಾಗಲಿ ಅಥವಾ ಕೆ.ಇ.ಬಿ., ಬೈವಾಟರ್ ಇರಬಹುದು, ಇಂಥ ಹೆಚ್ಚಿನ ಪಾಲಿಸಿಗಳ ಬಗ್ಗೆ ಶೂನ್ಯವೇಳೆಯಲ್ಲಿ ಮಾತ್ರ ಚರ್ಚೆ ಆಯಿತು. ಈ ಸಂದರ್ಭದಲ್ಲಿ ತಾವು ಇರಲಿಲ್ಲ. ಇದಕ್ಕೂ ಕೂಡ ಮಾನ್ಯ ಮಂತ್ರಿಗಳು ಹೇಳಿದರು, ಸಂಬಂಧಪಟ್ಟ ಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಹಾಗೂ ಪ್ರಧಾನಮಂತ್ರಿಗಳಿಗೂ ಕೂಡ ಇದರ ಬಗ್ಗೆ ನಮ್ಮದೇ ಆದಂತಹ ಪ್ರತಿಭಟನೆಯನ್ನು ತೋರಿಸಬೇಕಾಗುತ್ತದೆ ಮತ್ತು ಸಲಹೆಗಳನ್ನು ಕೊಡಬೇಕಾಗುತ್ತದೆ ಎನ್ನತಕ್ಕಂತಹ ಮಾತುಗಳನ್ನು ಕೂಡ ಇವತ್ತಿನ ದಿವಸ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಹೀಗೆ ಅನೇಕ ವಿಷಯಗಳು ಇಲ್ಲಿ ಚರ್ಚೆಗೆ ಬಂದು ಇದಕ್ಕೆ ಸ್ವಲ್ಪಮಟ್ಟಿಗೆ ಪರಿಹಾರವನ್ನು ನಾವು ಕಂಡಿದ್ದೇವೆ; ಕೆಲವೊಂದಕ್ಕೆ ಕಂಡಿಲ್ಲ. ಈ ವಿಷಯದ ಬಗ್ಗೆ ನಾವು ಧರಣಿ ಮಾಡಿದ್ದೇವೆ, ಇದರಿಂದ ನಿಮ್ಮ ಮನಸ್ಸಿಗೆ ನೋವಾಗಿರಬಹುದು. ನಾವು ಕೆಲವು ಮಾತುಗಳನ್ನು ಸರ್ಕಾರಕ್ಕೆ ಕೇಳುತ್ತೇವೆ, ಇದಕ್ಕೆ ಸರ್ಕಾರ ಸ್ಪಂದಿಸದೆ ಇದ್ದಾಗ ಅಥವಾ ಸ್ಪಂದನೆ ಮಾಡತಕ್ಕಂಥ ಮಾತು ಹೇಳದೆ ಹೋದಾಗ ನಮಗೆ ಆ ಸಂದರ್ಭದಲ್ಲಿ ಸ್ವಲ್ಪ ನೋವಾಗುತ್ತದೆ. ಉದಾಹರಣೆ ಹೇಳುವುದಾದರೆ, ಇವತ್ತಿನದಿವನ ನ್ಯಾಯಯುತವಾದ ಬೇಡಿಕೆಯಾಗಿರುವ ಬೈವಾಟರ್ ವಿಷಯಕ್ಕೆ ಸರ್ಕಾರದವರು ಅದರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇವತ್ತು ಸ್ಪಂದಿಸಲಿಲ್ಲ. ನನ್ನದು ಒಂದೇ ಮಾತೆಂದು, ಒಂದೇ ವರ್ಡ್‌ನಲ್ಲಿ ಉತ್ತರ ಹೇಳಿ ಕುಳಿತರು. ನಿಜವಾಗಿಯೂ ಇದು ನಮಗೆ ನೋವು ತರತಕ್ಕಂಥ ಸಂಗತಿಯಾಗಿದ್ದು, ಇದರಿಂದ ಮುಂದೆ ಆಗತಕ್ಕಂಥ ಪರಿಣಾಮವನ್ನು ನಾವು, ನೀವು ಅನುಭವಿಸಬೇಕಾಗುತ್ತದೆ. ಇದಕ್ಕಾಗಿ ನಾನು ಹೇಳುವುದೇನೆಂದರೆ, ಇಂಥ ಪ್ರಮುಖವಾದಂತಹ ವಿಷಯಗಳಿಗೆ ಟ್ರಾನ್ಸ್‌ಪರೆನ್ಸಿ ಇರಬೇಕೆಂದರೆ, ನಾವೆಲ್ಲರೂ ಕೂಡ ಈ ವಿಷಯ ಚರ್ಚೆಯಾಗುವುದಕ್ಕೆ ನೀವು ಹೌಸ್ ಕಮಿಟಿ ಮಾಡುವುದಕ್ಕೆ ಒಪ್ಪಬೇಕಾಗಿತ್ತು. ಆದರೆ ಅದನ್ನು ನೀವು ಒಪ್ಪಲಿಲ್ಲ, ಇದಕ್ಕಾಗಿ ನಾವು ಧರಣಿ ಮಾಡಬೇಕಾಯಿತು. ಈ ಸಂದರ್ಭದಲ್ಲಿ ನಿಮಗೆ ನೋವು ಕೂಡ ಉಂಟಾಗಿದೆ ಎಂದು ನನಗೆ ಗೊತ್ತು. ಏಕೆಂದರೆ, ತಮ್ಮ ನಾಲ್ಕೂವರೆ ವರ್ಷಗಳ ಅವಧಿಯಲ್ಲಿ ಅನೇಕ ಕೆಲಸಗಳನ್ನು ಈ ಸದನದಲ್ಲಿ ಆಗಿವೆ. ಒಂದೆರಡು ನಿಜವಾಗಿಯೂ ಬಡವರಿಗೆ ತೊಂದರೆ ಆಗತಕ್ಕಂಥ ಕೆಲಸ ಸರ್ಕಾರದ ಕಡೆಯಿಂದ ಆಗಿದೆ. ಆದರೂ ಕೂಡ ತಾವು ಮತ್ತು ನಾವುಗಳೆಲ್ಲರೂ ಮೂಕ ಪ್ರೇಕ್ಷಕರಂತೆ ಇರುವ ಪರಿಸ್ಥಿತಿ ಕೂಡ ಬಂದಿದೆ. ಉದಾಹರಣೆಗೆ ಹೇಳುವುದಾದರೆ, ಲ್ಯಾಂಡ್ ರಿಫಾರ್ಮ್ಸ್ ಆ್ಯಕ್ಟ್‌ನಲ್ಲಿ ಬಹಳಷ್ಟು ತಿರುಚುಮುರುಚು ಮಾಡತಕ್ಕಂಥ ಕೆಲಸ ಆಯಿತು. ಇದಕ್ಕಾಗಿ ನಾವು ಕಷ್ಟಪಟ್ಟು ಇಡೀ ನಮ್ಮ ಜೀವನ ಪರ್ಯಂತ ಹೋರಾಟ ಮಾಡಿದ್ದೇವೆ, ಇದಕ್ಕೆ ತಾವು ಕೂಡ ಭಾಗಿಯಾಗಿದ್ದೀರಿ. ಆದರೆ ಇದು ಕೊನೆಗೆ ನಮ್ಮ ಕೈತಪ್ಪಿ ಹೋಯಿತು. ಅದೇ ರೀತಿ ಇವತ್ತು ಬೈವಾಟರ್ ಮತ್ತು ಯು.ಕೆ.ಪಿ. ವಿಷಯಗಳಾಗಿವೆ, ಇವುಗಳನ್ನೆಲ್ಲಾ ನಾನು ಪುನಃ ಪ್ರಸ್ತಾಪ ಮಾಡುವುದಿಲ್ಲ. ಮತ್ತೆ ಇದನ್ನು ಪ್ರಸ್ತಾಪ

ಮಾಡಿ ತಮಗೆ ಬೇಜಾರುಪಡಿಸತಕ್ಕಂಥದ್ದಾಗಲಿ ಅಥವಾ ಸರ್ಕಾರದವರು ಪುನಃ ಇದೇ ಮಾತಿಗೆ ಪ್ರತಿಭಟನೆ ಮಾಡುವುದಾಗಲಿ, ನನಗೀಗ ಬೇಕಾಗಿಲ್ಲ. ಈ ವಿಷಯವನ್ನು ಯಾವ ಕೋರಂನಲ್ಲಿ ಮಾತನಾಡಬೇಕೋ ಅಲ್ಲಿಗೆ ಹೋಗಿ ನಾವು ಮಾತನಾಡುತ್ತೇವೆ. ಈ ಎಲ್ಲಾ ಸಮಸ್ಯೆಗಳು ಇದ್ದರೂ ಕೂಡ ನೀವು ಧೈರ್ಯವಾಗಿ ನಮ್ಮನ್ನು ಸಮಾಧಾನ ಪಡಿಸಿ, ಅನೇಕ ಸಾರಿ ಸದನದಲ್ಲಿ ಕೋರಂ ಇಲ್ಲದಿದ್ದರೂ ಕೂಡ ತಾವು ಸರ್ಕಾರಕ್ಕೆ ಬುದ್ಧಿ ಹೇಳಿದ್ದೀರಿ. ಇಲ್ಲಿ ನಮ್ಮ ಪಕ್ಷದವರಾಗಲಿ, ಬಿಜೆಪಿಯವರಾಗಲಿ, ಸ್ವತಂತ್ರ ಪಕ್ಷದವರಾಗಲಿ, ತಮ್ಮ ಮಾತಿಗೆ ನಾವೆಲ್ಲರೂ ಬೆಲೆ ಕೊಟ್ಟು ಕೋರಂ ಇಲ್ಲದಿದ್ದರೂ ಕೂಡ ಚರ್ಚೆ ಮಾಡಿದಂತಹ ಸಂದರ್ಭಗಳು ಕೂಡ ತಮಗೆ ಗೊತ್ತಿದೆ. ಹಾಗೆಯೇ ಸದನದಲ್ಲಿ ಮಂತ್ರಿಗಳು ಇಲ್ಲದಿದ್ದರೂ ಕೂಡ ಚರ್ಚೆ ಮಾಡಿದಂತಹ ಸಂದರ್ಭಗಳು ಇವೆ. ಸದನದಲ್ಲಿ ಸಂಬಂಧಪಟ್ಟ ಮಂತ್ರಿಗಳು ಇಲ್ಲದಿದ್ದರೂ ಕೂಡ ಚರ್ಚೆಗೆ ತಾವು ಅವಕಾಶ ಕೊಟ್ಟು ಚರ್ಚೆಯಾಗತಕ್ಕಂಥ ವಿಷಯಗಳು ಜನರಿಗೆ ಗೊತ್ತಾಗಲಿ ಎಂದು, ತಾವು ಮಾತನಾಡಲು ಅವಕಾಶ ಮಾಡಿಕೊಟ್ಟಂತಹ ಎಲ್ಲಾ ಸಂದರ್ಭಗಳನ್ನು ನೆನಸಿಕೊಂಡಾಗ, ನೀವು ಸರ್ಕಾರಕ್ಕೆ ಸಹಾಯ ಮಾಡಿದ್ದೀರೆಂದು ನಾನು ಹೇಳುವುದಿಲ್ಲ. ಆದರೆ, ಈ ಸದನದಲ್ಲಿ ಕಲಾಪಗಳು ನಡೆಯಬೇಕು ಎನ್ನುವ ದೃಷ್ಟಿಯಿಂದ ಮತ್ತು ಜನರಿಗೆ ಇದರಿಂದ ಏನಾದರೊಂದು ಪರಿಹಾರ ಸಿಗಲಿ ಎನ್ನುವ ದೃಷ್ಟಿಯಿಂದ ಈ ಸದನವನ್ನು ಬಹಳ ಶಿಸ್ತಿನಿಂದ ನಡೆಸಿಕೊಂಡು ಬಂದಿದ್ದೀರಿ. ಸದನವನ್ನು ನಡೆಸುವಂತಹ ಸಂದರ್ಭದಲ್ಲಿ ಸಿಟ್ಟಾದಂತಹ ಸದಸ್ಯರುಗಳನ್ನು ಕರೆಸಿ, ಮಾತನಾಡಿಸುತ್ತಿದ್ದಿರಿ. ಕೆಲವು ಮಂತ್ರಿಗಳು ಯಾವುದೇ ಕೆಲಸವನ್ನು ಮಾಡಿಸದಿದ್ದರೂ ಕೂಡ ಸಂಬಂಧಪಟ್ಟಂತಹ ಶಾಸಕರನ್ನು ಕರೆಸಿ ಆ ಸಮಸ್ಯೆಗಳನ್ನು ಅವರ ಮುಂದೆಯೇ ಬಗೆಹರಿಸುವಂತಹ ಪ್ರಯತ್ನವನ್ನು ತಾವು ಮಾಡಿದ್ದೀರಿ. ಅದಕ್ಕಾಗಿ ನಾನು ತಮಗೆ ಅನಂತಾನಂತ ಅಭಿನಂದನೆಗಳನ್ನು ಹಾಗೂ ಧನ್ಯವಾದಗಳನ್ನು ಈ ಸಂದರ್ಭದಲ್ಲಿ ಅರ್ಪಿಸುತ್ತೇನೆ.

ಏಕೆಂದರೆ ಇದೆ ಒಂದು ಸದನದಲ್ಲಿ ಕಳೆದ 5 ವರ್ಷಗಳಲ್ಲಿ ಏನು ನಡೆಯಿತು ಅದನ್ನು ಮುಂದೆ ಬರತಕ್ಕಂಥ ಜನ ನೋಡುತ್ತಾರೆ. ಅದಕ್ಕಾಗಿ ತಾವು ಕೆಲವು ಒಳ್ಳೆಯ ಸಂಪ್ರದಾಯಗಳನ್ನು ಕೂಡ ಹಾಕಿದ್ದೀರಿ. ಅನೇಕ ಸಾರಿ ತಾವು ಮುಜುಗರಕ್ಕೂ ಕೂಡ ಈಡಾದರೂ ಅಡ್ಡಿ ಇಲ್ಲ, ತೊಂದರೆಯನ್ನು ಕೂಡ ತಾವು ಅನುಭವಿಸಿದ್ದೀರಿ. ನೋವನ್ನು ತಾವು ಅನುಭವಿಸಿದ್ದೀರಿ. ಕೆಲವು ಸಲ ಸಿಟ್ಟಿಗೆ ಬರತಕ್ಕಂಥದ್ದು, ಏಕೆಂದರೆ ಇಲ್ಲಿ ನಮ್ಮ ನಡವಳಿಕೆಯಿಂದ ನಿಮಗೆ ಸ್ವಲ್ಪ ಬೇಜಾರಾಗಿ ಸಿಟ್ಟಿಗೆ ಬಂದು ಹೋದಂಥ ಉದಾಹರಣೆಗಳನ್ನು ಕೂಡ ಇಲ್ಲಿ ಇರಬಹುದು. ಅದಕ್ಕೆ ಕೆಲವು ಜನ ಹೆಚ್ಚು ಕಡಿಮೆ ಅಂದುಕೊಳ್ಳತಕ್ಕಂಥದ್ದು, ಮಾತನಾಡಿಕೊಳ್ಳತಕ್ಕಂಥದ್ದು ತಮಗೂ ಕೂಡ ಗೊತ್ತಿದೆ. ಅದನ್ನು ತಾವು ಯಾವುದನ್ನೂ ಕೂಡ ಮನಸ್ಸಿನಲ್ಲಿಟ್ಟುಕೊಳ್ಳದೆ ನಿಮ್ಮ ಕರ್ತವ್ಯವನ್ನು ನೀವು ಮಾಡಿದಿರಿ. ತಾವು ನಿಷ್ಠೂರವಾದಿ ಏಕೆಂದರೆ ಯಾವ ಮನುಷ್ಯ ಸತ್ಯ ಹೇಳುತ್ತಾನೆ. ಅವರು ನಿಜವಾಗಲೂ ನಿಷ್ಠೂರವಾದಿಯಾಗಿ ಇರಬೇಕಾಗುತ್ತದೆ. ಇಲ್ಲವಾದರೆ ಎರಡು ಕಡೆ ಕೈ ಇಟ್ಟಂಥವರು ಸ್ವಲ್ಪ ಹೆಚ್ಚು ಕಡಿಮೆ ರೀತಿಯಿಂದ ಮಾಡಿಕೊಂಡು ಹೋಗುತ್ತಾರೆ. ಅದಕ್ಕಾಗಿ ನಾನು ಪುನಃ ಹೆಚ್ಚು ವಿಷಯವನ್ನು ಪ್ರಸ್ತಾಪ ಮಾಡದೇ ಇವತ್ತು ತಾವು ಸಹಕರಿಸಿ ಸರ್ಕಾರಕ್ಕೂ ಕೂಡ ತಪ್ಪಿದಲ್ಲಿ ಬುದ್ಧಿ ಹೇಳಿ, ನಾವು ಕೂಡ ಎಲ್ಲಿ ಎಡವಿದ್ದೇವೆ ಅದರ ಬಗ್ಗೆ ತಾವು ಕೂಡ ಆತಂಕವನ್ನು ವ್ಯಕ್ತಪಡಿಸಿ ನಮ್ಮನ್ನು ಕರೆಸಿ ಮಾತನಾಡಿ ಸದನವನ್ನು ಸುಗಮವಾಗಿ ನಡೆಸಿಕೊಟ್ಟು ಇವತ್ತು 18 ದಿವಸ ಸದನವನ್ನು ಯಶಸ್ವಿಯಾಗಿ

ನಡೆಸುವುದಲ್ಲದೆ ಹಿಂದೆ ನಾಲ್ಕೂವರೆ ವರ್ಷಗಳಲ್ಲಿ ಕೂಡ ತಾವು ಅನೇಕ ಸಹಾಯ ಸಹಕಾರವನ್ನು ಮಾಡಿ ಈ ಒಂದು ಸದನದ ಘನತೆ-ಗೌರವವನ್ನು ಎತ್ತಿ ಹಿಡಿದಿದ್ದಕ್ಕಾಗಿ ತಮಗೆ ಪುನಃ ನಾನು ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವಾಗ ನನ್ನ ಭಾಷಣದಲ್ಲಿ ಮೊದಲೇ ನಿಮಗೆ ಅಭಿನಂದನೆಗಳನ್ನು ಸಲ್ಲಿಸಿ ಬಿಟ್ಟಿದ್ದೇನೆ. ಒಂದು ಸಂತೋಷವೆಂದರೆ ನಾನು ಬಹಳ ಜನಕ್ಕೆ ಇದು ಕೊನೆಯ ಅಧಿವೇಶನ ಎಂದು ಹೇಳಿದೆ, ಆಗ ಇಲ್ಲಾ ಇನ್ನೂ ಮುಂದೆ ಅಧಿವೇಶನ ಇದೆ ಎಂದರು. ಈ ಅಧಿವೇಶನಕ್ಕೂ ಮುಂದೆ ಬರತಕ್ಕಂಥ ಅಧಿವೇಶನಕ್ಕೂ ಬಹಳ ವ್ಯತ್ಯಾಸ ಇದೆ. ಒಂದು ಬಹಳ ಅತ್ಯಂತ ಸಂತೋಷವೆಂದು ಹೇಳಿದರೆ. ತಾವು ಅಧ್ಯಕ್ಷರಾಗಿ ಈ ಪೀಠಕ್ಕೆ ಬಂದಾಗಲೇ ಬಹಳ ವಿಶೇಷವಾಗಿ, ಬಹಳ ವರ್ಣರಂಜಿತ ವ್ಯಕ್ತಿತ್ವವೆಂದು ನಾನು ನಿಮಗೆ ಹೇಳಿದೆ. ಬಹಳ ಪ್ರೀತಿ ವಿಶ್ವಾಸ ಹಾಗೂ ಅಭಿಮಾನದ ಮೇಲೆ, ನನಗೆ ಅನಿಸುತ್ತದೆ; ಒಳ್ಳೆಯ, ಉತ್ತಮವಾದಂಥ ಸ್ನೇಹ ಜೀವಿ. ಅದರ ಬಗ್ಗೆ ಎರಡನೆಯ ಅಭಿಪ್ರಾಯ ಇಲ್ಲ. ಸೂಕ್ಷ್ಮವಾದಂಥ ವ್ಯಕ್ತಿತ್ವ. ನಾವು ತಮ್ಮ ಸೂಕ್ಷ್ಮತೆಯನ್ನು ನೋಡಿಕೊಂಡು ಇಲ್ಲಿ ಭಾಷಣ ಮಾಡುತ್ತಿದ್ದೆವು. ನಾನು ಅನೇಕ ಸಲ ಬಂದು ನೀವು ಇವತ್ತು ಏಕೆ ಬೇಜಾರಾಗಿದ್ದೀರಿ, ಏಕೆ ಈ ರೀತಿ ಎದ್ದು ಹೋದಿರಿ, ನೀವು ಎದ್ದು ಹೋದಾಗಲೆಲ್ಲಾ ನಿಮ್ಮನ್ನು ಕರೆದುಕೊಂಡು ಬಂದಿರುವವರು ನಾನು ಮತ್ತು ಮಾನ್ಯ ನಂಜೇಗೌಡರು. ನನಗೆ ಅನಿಸುತ್ತದೆ; ನೀವು ಒಳ್ಳೆಯ ವ್ಯಕ್ತಿತ್ವವನ್ನು ಉಳ್ಳಂಥವರು. ಈ ಸದನದಲ್ಲಿ ಎಲ್ಲಾ ಸದಸ್ಯರಿಗೂ, ಯಾವುದೇ ಪಕ್ಷದಲ್ಲಿರಲಿ, ಎಲ್ಲಾ ಸದಸ್ಯರನ್ನು ಅತ್ಯಂತ ಪ್ರೀತಿ, ವಿಶ್ವಾಸ ಅಭಿಮಾನದ ಮೇಲೆ ಕಂಡು ಎಲ್ಲಾ ಸದಸ್ಯರಿಗೂ ಮಾತನಾಡತಕ್ಕಂಥ ಅವಕಾಶವನ್ನು ಕೊಟ್ಟಿರತಕ್ಕಂಥ ಒಬ್ಬ ಆದರ್ಶವಾದಂಥ ವ್ಯಕ್ತಿತ್ವವೆಂದು ನಾನು ಅನೇಕ ಸಾರಿ ಹೇಳಿದ್ದೇನೆ. ನನ್ನ ಒಂದು ಭಾಷಣದಲ್ಲಿ ಹೇಳಿದೆ, ಬೆಲ್ ಹೊಡೆಯದೆ ಎಲ್ಲರ ಭಾಷಣವನ್ನು ಎಷ್ಟೇ ತೊಂದರೆಯಾದರೂ ಕೇಳಿರತಕ್ಕಂಥ ವ್ಯಕ್ತಿತ್ವ. ಒಂದು ನೋವು ಏನು ಅಂದರೆ; ಮೊದಲನೇ ವರ್ಷ ಬಹಳ ಸಲ ನಮ್ಮನ್ನು ತಾವು ಊಟಕ್ಕೆ ಕರೆದಿರಿ. ಎರಡನೇ ವರ್ಷ ಊಟಕ್ಕೆ ಕರೆಯುವುದನ್ನು ತಾವು ಕಡಿಮೆ ಮಾಡಿದಿರಿ. ಮೂರನೇ ವರ್ಷ ತೀರಾ ಕಡಿಮೆ ಮಾಡಿದಿರಿ. ನಾಲ್ಕನೇ ವರ್ಷ ಅತ್ಯಂತ ಕಡಿಮೆ ಮಾಡಿದಿರಿ. ಈ ವರ್ಷ ಇಲ್ಲವೇ ಇಲ್ಲ. ಮಾನ್ಯ ನಂಜೇಗೌಡರು ಹಾಗೂ ನಾಗೇಗೌಡರು ಹೇಳುತ್ತಾರೆ, ಏಕೆ ಕಡಿಮೆ ಮಾಡಿದಿರಿ, ಎನ್ನುವುದನ್ನು ನೀವೇ ನೋಡಿಕೊಳ್ಳಬೇಕು. ಆ ಒಂದು ನಷ್ಟವನ್ನು ತಾವು ಈ ಮೂರು-ನಾಲ್ಕು ತಿಂಗಳಲ್ಲಿ ತುಂಬಬೇಕೆಂದು ಹೇಳಿ ಅತ್ಯಂತ ಪ್ರೀತಿ ವಿಶ್ವಾಸದಿಂದ ಹೇಳುತ್ತೇನೆ. ಏನು ನಾಗೇಗೌಡರೆ, ಅದನ್ನು ತಾವು ತುಂಬಲೇಬೇಕು. ಏಕೆಂದರೆ ನೀವು ಮೊದಲನೇ ವರ್ಷ ಕರೆದಂಥ ಊಟ ಎಷ್ಟು? ಎರಡನೆ ವರ್ಷ ಕರೆದಂಥದ್ದು, ಮೂರನೇ ವರ್ಷ ಏಕೆ ನೀವು ನಮ್ಮನ್ನು ಕೈಬಿಟ್ಟಿರಿ. ಅದರ ವಿವರಣೆಯನ್ನು ಈ ಸದನದಲ್ಲಿ ಕೊಡುವುದು ಬೇಡ. ಹೊರಗಡೆಯಾದರೂ ನೀವು ನಮ್ಮ ಸ್ನೇಹಿತರಿಗೆ ಕೊಡಬೇಕು. ಮತ್ತೊಮ್ಮೆ, ಮತ್ತೊಮ್ಮೆ ಈ ಸದನಕ್ಕೆ ತಾವು ಗೆಲ್ಲುತ್ತಾ ಬರಬೇಕು. ನೀವು ಸಭಾಧ್ಯಕ್ಷರಾಗಬಹುದು, ನೀವು ಯಾವುದೇ ರೂಪದಲ್ಲಿ ಬರಬಹುದು ಅಥವಾ ಮಂತ್ರಿಯಾಗಿರಬಹುದು, ಮುಖ್ಯ ಮಂತ್ರಿಯಾಗಿರಬಹುದು. ನನಗೆ ಅದರ ಬಗ್ಗೆ ಏನು ತಕರಾರು ಇಲ್ಲ. ನೀವು ಯಾವುದಾದರೂ ರೂಪದಲ್ಲಿ ಈ ಸದನಕ್ಕೆ ಬರಬೇಕು. ನಾವು ಅನೇಕ ಸಾರಿ ಹೇಳಿದ್ದೇವೆ. ಸಭಾಧ್ಯಕ್ಷರ ವಿರುದ್ಧ ಯಾರು ಚುನಾವಣೆಗೆ ನಿಲ್ಲಬಾರದೆಂದು ಹೇಳಿದ್ದೇವೆ.

ಅದನ್ನು ತಿಳಿದುಕೊಳ್ಳಬೇಕು. ನಾನು ತಿಳಿದುಕೊಳ್ಳಬೇಕಾಗಿಲ್ಲ. ನೀವು ಯಾವುದೇ ಪಕ್ಷದಲ್ಲಿ ಚುನಾವಣೆಗೆ ನಿಂತುಕೊಂಡರು ನಾನು ನಿಮ್ಮ ಕ್ಷೇತ್ರಕ್ಕೆ ಬಂದು ನಾನು ನಿಮಗೆ ಓಟು ಕೊಡಿ ಎಂದು ಮಾತನಾಡುತ್ತೇನೆ. ನೀವು ಯಾವುದೇ ಪಕ್ಷದಲ್ಲಿ ನಿಂತುಕೊಳ್ಳಿ. ನಾನು ಹೇಳುತ್ತಿರುವುದು; ಅಭ್ಯರ್ಥಿ ಪ್ರಶ್ನೆ ಅಲ್ಲ, ಅವರು ಯಾವುದೇ ಪಕ್ಷದಲ್ಲಿ ನಿಂತುಕೊಳ್ಳಲಿ, ಕಾಂಗ್ರೆಸ್‌ನಲ್ಲಿ ನಿಂತುಕೊಳ್ಳಲಿ, ಜನತಾದಳದಲ್ಲಿ ನಿಂತುಕೊಳ್ಳಲಿ ನಾನಂತು ಅವರ ಪರವಾಗಿ ಮತಕೊಡಬೇಕೆಂದು ಜನರಲ್ಲಿ ಕೇಳಿಕೊಳ್ಳುತ್ತೇನೆ. ಏಕೆಂದರೆ; ಅವರು ಈ ಸದನದ ಸಭಾಧ್ಯಕ್ಷರಾಗಿದ್ದವರು. ಅವರಿಗೆ ನಾವು ಎಷ್ಟಾದರೂ ನಮ್ಮ ಕೃತಜ್ಞತೆ ಮತ್ತು ಗೌರವವನ್ನು ತೋರಿಸಬೇಕಾದುದು ಕರ್ತವ್ಯ. ನನ್ನ ಪರವಾಗಿ ಎಷ್ಟು ಓಟು ಇವೆ ಬಿಟ್ಟಿವೆ ಆ ಪ್ರಶ್ನೆ ಬೇರೆ. ನಾನಂತು ನೀವು ಯಾವುದೇ ಪಕ್ಷದಲ್ಲಿ ನಿಂತುಕೊಂಡರು ನಾನು ಅಲ್ಲಿಗೆ ಬಂದು ಮತ ಕೊಡಿ ಎಂದು ಕೇಳುವುದು ಒಂದು. ನಿಮ್ಮ ವಿರುದ್ಧ ಪ್ರಬಲವಾದಂಥ ಅಭ್ಯರ್ಥಿಯನ್ನು ಹಾಕಬೇಡಿ ಎಂದು ಹೇಳುವುದು ಕಾಂಗ್ರೆಸ್ಸಿನವರಿಗೆ. ಹಾಕಬೇಡಿ ಎಂದು ಹೇಳತಕ್ಕಂಥದ್ದು ಭಾರತೀಯ ಜನತಾ ಪಾರ್ಟಿಯವರಿಗೆ. ಇವರು ಇಬ್ಬರು ತೀರ್ಮಾನ ಮಾಡತಕ್ಕಂಥದ್ದು ಅವರ ಕರ್ತವ್ಯ ನನ್ನದಲ್ಲ. ಇಲ್ಲಿ ಬಂದು ನಿಮಗೆ ಹೇಳತಕ್ಕಂಥ ವಿಚಾರ ಬೇರೆ. ಆದ್ದರಿಂದ, ನಾನು ಮಾನ್ಯ ಖರ್ಗೆಯವರಿಗೆ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ ಮತ್ತು ಭಾರತೀಯ ಜನತಾ ಪಾರ್ಟಿಯ ಉಪ ನಾಯಕರಾದ ಶ್ರೀ ಸುರೇಶ್ ಕುಮಾರ್‌ರವರಿಗೂ ನಾನು ಕಳಕಳಿಯ ಮನವಿಯನ್ನು ಮಾಡಿಕೊಳ್ಳುತ್ತೇನೆ. ನಾನು ಏನು ಹೇಳುತ್ತೇನೆಂದರೆ ಈ ಸದನದ ಇಡೀ 4 ವರ್ಷ ಇಡೀ ಎಲ್ಲಾ ಪಕ್ಷದವರ ಎಲ್ಲರ ಜೊತೆಯಲ್ಲಿ ಹೊಂದಾಣಿಕೆ ಮಾಡಿಕೊಂಡು ಬಹಳ ಪ್ರೀತಿ ವಿಶ್ವಾಸದ ಮೇಲೆ ಹೋಗಿರತಕ್ಕಂಥ ಅತ್ಯಂತ ಆತ್ಮೀಯ ಅಧ್ಯಕ್ಷರು ನೀವು, ಅದರ ಬಗ್ಗೆ ಎರಡನೇ ಅಭಿಪ್ರಾಯ ಇಲ್ಲ. ಮತ್ತೊಮ್ಮೆ ನೀವು ನಮ್ಮ ನಷ್ಟವನ್ನು ತುಂಬಿಕೊಡಬೇಕೆಂದು ನಾಗೇಗೌಡರ ಪರವಾಗಿ ಮತ್ತು ನಿಮ್ಮ ಕೆಲವು ಅನೇಕ ಸ್ನೇಹಿತರ ಪರವಾಗಿ ನೀವು ಅವರಿಗೆ ಕೊಡಬೇಕು. ಬೈರೇಗೌಡರು ಅಷ್ಟೆ, ಅವರಿಗೆ ಗೊತ್ತು. ಬಹಳ ಆತ್ಮೀಯರು ಎಂದು. ಆದ್ದರಿಂದ ಈ ನಷ್ಟವನ್ನು ತುಂಬಿ ಕೊಡಲೇಬೇಕು. ಆ ವಿಚಾರದಲ್ಲಿ ಮಾತ್ರ ನೀವು ಹಿಂದೆ ಮುಂದೆ ಬೀಳುವುದಕ್ಕೆ ಸಾಧ್ಯವಿಲ್ಲ. ಅದನ್ನು ನಾನು ಸ್ಪಷ್ಟವಾಗಿ ಹೇಳಿ, ಆ ವಿಚಾರದಲ್ಲಿ ರಾಜೀ ಇಲ್ಲವೇ ಇಲ್ಲ. ಅದರ ಬಗ್ಗೆ ನಮಗೆ ನೋವು ಇದೆ ಆ ರಾಜೀ ಮಾತ್ರ ಆಗುವುದಕ್ಕೆ ನಮಗೆ ಸಾಧ್ಯವಿಲ್ಲ. ಆದ್ದರಿಂದ ನೀವು ಯಾವ ತರಹ ಈ 4-5 ತಿಂಗಳಲ್ಲಿ ಆ ಲಾಭ ದೊರಕಿಸುತ್ತೀರಿ ಅದು ನಿಮಗೆ ಸೇರಿದ್ದು. ಆದ್ದರಿಂದ ನಾನು ಅತ್ಯಂತ ಪ್ರೀತಿ ವಿಶ್ವಾಸದಿಂದ ಈ ಮಾತನ್ನು ಹೇಳಿದ್ದೇನೆ. ನೀವು ಚುನಾವಣೆಗೆ ನಿಂತುಕೊಂಡಾಗ ನೀವು ಯಾವ್ಹೊತ್ತು ಕರೆಯುತ್ತೀರಿ, ಎಲ್ಲಿಗೆ ಕರೆಯುತ್ತೀರಿ ಯಾವ ಊರಿಗೆ ಕರೆಯುತ್ತೀರಿ ನಾನಂತು ಬರುತ್ತೇನೆ ನಿಮ್ಮ ಪರವಾಗಿ ಮತ ಕೊಡಬೇಕೆಂದು ಹೇಳತಕ್ಕಂಥದ್ದು, ಅಷ್ಟು ನನ್ನ ಸೇವೆಯನ್ನು ಪ್ರಾಮಾಣಿಕವಾಗಿ ನಾನು ಮಾಡಬೇಕೆಂದು ಇದ್ದೇನೆ. ನೀವು ಶಾಸನಸಭೆಗೆ ಬಂದಮೇಲೆ ನಿಮ್ಮ ನಮ್ಮ ಸ್ನೇಹ ಅಲ್ಲ. ಕಳೆದ ಹತ್ತಾರು ವರ್ಷಗಳ ಹೋರಾಟ, ಇತಿಹಾಸ ಅನೇಕ ವಿಚಾರ ಇದೆ. ಆ ವಿಚಾರದಲ್ಲಿ ನಾವು ನೀವು ಒಟ್ಟಾಗಿ ಬಂದಿದ್ದೇವೆ. ತಾವು ಅಧ್ಯಕ್ಷರಾಗಿ ಬಹಳ ಉತ್ತಮವಾದಂಥ ಕೆಲಸವನ್ನು ಮಾಡಿದ್ದೀರಿ. ತಮ್ಮ ಶ್ರೇಯಸ್ಸನ್ನು ತಮ್ಮ ಪೀಠಕ್ಕೆ ತಂದಿರುತ್ತೀರಿ. ಎನ್ನುವ ಮಾತನ್ನು ಬಹಳ ಪ್ರೀತಿ ವಿಶ್ವಾಸದಿಂದ ಹೇಳುತ್ತೇನೆ. ಒಂದು ಮಾತು ನಿಜ. ನೀವು ಸ್ನೇಹ ಜೀವಿ ಎನ್ನುವುದಂತು ನಿಜ, ಇದರಲ್ಲಿ ಎರಡು ಮಾತಿಲ್ಲ. ಯಾವುದೇ ಸಂದರ್ಭದಲ್ಲಿ ನೀವು ಮುನಿಸಿಕೊಂಡು ಹೋಗಿರಬಹುದು, ಎದ್ದು

ಹೋಗಿರಬಹುದು. ನಿಮ್ಮ ಮಾತುಕತೆ ಹಾಗೂ ಸ್ವಭಾವವನ್ನು ನೋಡಿದಾಗ ನೀವು ಬಹಳ ಪ್ರೀತಿ ವಿಶ್ವಾಸದಿಂದ ನಡೆದುಕೊಂಡಿದ್ದೀರಿ ಎನ್ನುವ ಮಾತನ್ನು ಮತ್ತೊಮ್ಮೆ ಹೇಳುತ್ತೇನೆ, ನಿಮಗೆ ದೇವರು ಒಳ್ಳೆಯದು ಮಾಡಲಿ, ನಮ್ಮ ಜೊತೆಯಲ್ಲಿ ನೀವು ಪ್ರೀತಿಯಿಂದ ಇದ್ದೀರಿ, ನಾವಂತು ಇರುತ್ತೇವೆ ಬಿಡಿ. ನಾನಂತು ನಿಮ್ಮ ಜೊತೆಯಲ್ಲಿ, ನೀವು ಯಾವ ಪಕ್ಷದಲ್ಲಿ ಇರಲಿ, ಎಲ್ಲೇ ಇರಲಿ ನಿಮ್ಮ ಜೊತೆಯಲ್ಲಿ ಇರುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿ ಇಷ್ಟು ಸುಲಲಿತವಾಗಿ ಈ ಸದನವನ್ನು ಬಹಳ ಹೆಚ್ಚಿನ ರೀತಿಯಲ್ಲಿ ನಡೆಸಿಕೊಂಡು ಬಂದಿದ್ದೀರಿ. ತಾವು ಆ ಪೀಠದಲ್ಲಿ ಕುಳಿತುಕೊಂಡು ನಂತರ, ಜನತಾದಳದವರಿಗೆ ಅನೇಕ ತಲೆ ನೋವುಗಳು, ಅನೇಕ ಸಂದರ್ಭಗಳು ಅನೇಕ ಎಡರು-ತೊಡರುಗಳೆಲ್ಲ ಮಾಯವಾದವು. ಅದಕ್ಕಾಗಿಯೇ ನಿಮ್ಮನ್ನು ತಂಯ ಇಲ್ಲಿ ಕೂಡಿಸಿದರು ಎಂದು ನಾನು ಹೇಳಿದೆ. ತಮಗೆ ಜ್ಞಾಪಕ ಇರಬಹುದು, ನಾನು ಪ್ರಾರಂಭದಲ್ಲಿಯೇ ಹೇಳಿದೆ. ಮೊದಲು ತಾವು ಅಧ್ಯಕ್ಷರಾದಾಗ ಈ ಮಾತನ್ನು ನಾನು ಹೇಳಿದೆ. ನಿಮ್ಮನ್ನು ಅಲ್ಲಿ ಏಕೆ ತಂದು ಕೂಡಿಸಿದರು ಎನ್ನುವುದನ್ನು ಹೇಳಿದ್ದೇನೆ. ತಮಗೆ ಶ್ರೇಯಸ್ಸು ಕೊಡಲಿ, ದೇವರು ಒಳ್ಳೆಯದನ್ನು ಮಾಡಲಿ ನಿಮಗೆ ಆಯುರಾರೋಗ್ಯ ಕೊಡಲಿ ಎನ್ನತಕ್ಕಂಥ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

10 ಪ್ರಕಟಣೆ

ಅಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ ದಿನಾಂಕ 3ನೇ ಏಪ್ರಿಲ್ 1999ರಂದು ವಿಧಾನ ಪರಿಷತ್ತು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಯಿಲ್ಲದೆ ಅಂಗೀಕರಿಸಿತೆಂದು ಈ ಮೂಲಕ ತಿಳಿಸುತ್ತಿದ್ದೇನೆ.

1) ಕರ್ನಾಟಕ ಸ್ಟ್ಯಾಂಪು (ತಿದ್ದುಪಡಿ) ವಿಧೇಯಕ, 1999.
2) ಕರ್ನಾಟಕ ಸಂಸದೀಯ ಕಾರ್ಯದರ್ಶಿಗಳ ಭತ್ಯೆಗಳ (ತಿದ್ದುಪಡಿ) ವಿಧೇಯಕ, 1999.
3) ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ, 1999.
4) ಕರ್ನಾಟಕ ಸಂಘಗಳ ನೋಂದಣಿ (ತಿದ್ದುಪಡಿ) ವಿಧೇಯಕ, 1997.

11. ಸದನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಅಧ್ಯಕ್ಷರು : ಹತ್ತನೇ ವಿಧಾನ ಸಭೆಯ ಎಂಟನೇ ಅಧಿವೇಶನದ ದಿನಾಂಕ 8ನೇ ಮಾರ್ಚ್ 1999 ರಿಂದ 3ನೇ ಏಪ್ರಿಲ್ 1999ರವರೆಗೆ ನಡೆಸಿದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಸೋಮವಾರ, ದಿನಾಂಕ 8ನೇ ಮಾರ್ಚ್ 1999ರಂದು ಪ್ರಾರಂಭವಾದ ಎಂಟನೇ ಅಧಿವೇಶನವು 18 ದಿನಗಳು ನಡೆದು ಒಟ್ಟು 105.15 ಗಂಟೆಗಳ ಕಾಲ ಕಾರ್ಯಕಲಾಪಗಳನ್ನು ನಡೆಸಿರುತ್ತದೆ.

ಅಧಿವೇಶನದ ಪ್ರಾರಂಭದಂದು ಸನ್ಮಾನ್ಯ ರಾಜ್ಯಪಾಲರು ಉಭಯ ಸದನಗಳನ್ನುದ್ದೇಶಿಸಿ ಭಾಷಣ